**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 77/2016</u>**
**<u>C/W</u>**
**<u>ಎಸ್.ಸಿ. ಸಂಖ್ಯೆಃ 84/2017</u>**
**<u>ಎಸ್.ಸಿ. ಸಂಖ್ಯೆಃ 90/2018</u>**
**<u>ಎಸ್.ಸಿ. ಸಂಖ್ಯೆಃ 20/2019</u>**
**<u>ಎಸ್.ಸಿ. ಸಂಖ್ಯೆಃ 51/2019</u>**

ದಿನಾಂಕಃ 09.09.2021
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 10 ಪ್ರಾಸಾ - 4

| | | |
|---|---|---|
| ಹೆಸರು | ಃ | ಪಾಂಡುರಂಗಯ್ಯ |
| ತಂದೆಯ/ಗಂಡನ ಹೆಸರು | ಃ | ಮರಿಯಪ್ಪ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸಸ್ಥಳ | ಃ | ತಿರುಮಲೆ, ಮಾಗಡಿ ಟೌನ್ |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನಾನು ಪ್ರಶ್ನಿಸಿದಂತೆ ಯಾವುದೇ ಶವವನ್ನು ನೋಡಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ, ಪರಿಶೀಲಿಸಿದೆ. ಈ ಸಾಕ್ಷಿಯ ಸಾಕ್ಷ್ಯವು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ವಿರುದ್ಧವಾಗಿ ಕಂಡುಬಂದಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವುದು ನ್ಯಾಯಸಮ್ಮತವಾಗಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ**

2. ದಿನಾಂಕ 16.05.2016 ರಂದು ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು, ಬೆಂಗಳೂರು - ಕುಣಿಗಲ್ ರಸ್ತೆ, ಹೊನ್ನಾಪುರ ಕೆರೆಯ ಸ್ವಲ್ಪ ಹಿಂದೆ ನಾನು ಹೋಗುತ್ತಿರುವಾಗ ಹೊಸಪೇಟೆ ಸರ್ಕಲ್ ವಾಸಿ ಕೆಂಪಯ್ಯರವರ ಅನುಭೋಗದಲ್ಲಿರುವ ಸರ್ಕಾರಿ ಗೋಮಾಳದ ಜಮೀನಿನಲ್ಲಿ ಜನರು ಗುಂಪು ಕಟ್ಟಿಕೊಂಡು ನಿಂತಿದ್ದನ್ನು ನಾನು ನೋಡಲಾಗಿ, ಸದರಿ ಜಮೀನಿನ ಕಲ್ಲುಬಂಡೆಗಳ ಮಧ್ಯೆ ನೆಲದಲ್ಲಿ ಒಬ್ಬ ಅಪರಿಚಿತ ವ್ಯಕ್ತಿಯ ಗಂಡಸಿನ ಶವ ಅಂಗಾತವಾಗಿ ಬಿದ್ದಿದ್ದು, ಸದರಿ ಶವವು ಕೊಳೆತ ಸ್ಥಿತಿಯಲ್ಲಿ ಇತ್ತು, ಸದರಿ ಶವದ ಮೇಲೆ ಹುಳುಗಳು ಒಡಾಡುತ್ತಿದ್ದುದ್ದನ್ನು ನಾನು ನೋಡಿರುತ್ತೇನೆ, ಆ ಸಂದರ್ಭದಲ್ಲಿ ಪೊಲೀಸರು ಶವ ತನಿಖಾ ವರದಿಯನ್ನು ನಡೆಸಿದ ಪ್ರಕ್ರಿಯೆಯಲ್ಲಿ ಭಾಗವಹಿಸಿ ಪೊಲೀಸರಿಗೆ ನನ್ನ ವಿವರವಾದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಶವತನಿಖಾ ವರದಿಯ ಭಾಗಶಃ ಹೇಳಿಕೆಯನ್ನು ಓದಿ ಹೇಳಿದ್ದು ಪರಿಣಾಮ ಶವ ತನಿಖಾ ವರದಿಯನ್ನು ಈಗ ನಿಶಾನೆ ಪಿ 6 ಎಂದು, ನಿಶಾನೆ ಪಿ 6 ರ ಸಾಕ್ಷಿಗೆ ಓದಿ ಹೇಳಿದ ಭಾಗಶಃ ಹೇಳಿಕೆಯನ್ನು ಈಗ ನಿಶಾನೆ ಪಿ 6(ಎ) ಎಂದು ಗುರುತಿಸಲಾಯಿತು.

3. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಇರುವುದಿಲ್ಲ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.